# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
# Directorate of Medical Education.

ಆನಂದರಾವ್ ವೃತ್ತ, ಬೆಂಗಳೂರು-9
Ananda Rao Circle, Bangalore-9
email: dmekarnataka@yahoo.com


ಸಂಖ್ಯೆ: ವೈಶಿನಿ/ಪಿಜಿಎಸ್/38/2017-18 ದಿನಾಂಕ: 19-04-2018

## ಅಧಿಕೃತ ಜ್ಞಾಪನಾ ಪತ್ರ

ವಿಷಯ:- 2018-19ನೇ ಸಾಲಿನ ವೈದ್ಯಕೀಯ ಸ್ನಾತಕ್ಕೋತ್ತರ ಪ್ರವೇಶ ಬಯಸಿರುವ ಅಭ್ಯರ್ಥಿಗಳಿಂದ ಕಡ್ಡಾಯ ಗ್ರಾಮೀಣ ಸೇವೆ ಮಾಡುವ ಬಗ್ಗೆ ಅನುಬಂಧ-4 ರಂತೆ ಮತ್ತು ಮೂರು ವರ್ಷ ಸೇವೆ ಮಾಡಲು ಅನುಬಂಧ-4 ಎ ಪ್ರಕಾರ ಬಾಂಡ್‌ಗಳನ್ನು ಪಡೆದು ಕೆ.ಇ.ಎ ಪೋರ್ಟಲ್‌ಗೆ ಅಪ್‌ಲೋಡ್ ಮಾಡುವ ಬಗ್ಗೆ.

ಉಲ್ಲೇಖ:- ಸಂಖ್ಯೆ ಅಕುಕ (ವೈಶಿ) / 91/ ಅಮುಕಾ / 2018 ದಿನಾಂಕ:06-04-2018.

***

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಈ ಮೂಲಕ ತಿಳಿಯಬಯಸುವುದೇನೆಂದರೆ 2018-19ನೇ ಸಾಲಿನಲ್ಲಿ ವೈದ್ಯಕೀಯ ಸ್ನಾತಕ್ಕೋತ್ತರ ಪ್ರವೇಶಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಆಯ್ಕೆ ಪಡೆದಿರುವ ಸರ್ಕಾರಿ ಕೋಟಾದಡಿಯಲ್ಲಿನ ಅಭ್ಯರ್ಥಿಗಳು ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಮತ್ತು ಖಾಸಗಿ ಹಾಗೂ ಡೀಮ್ಡ್ ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳು ನೋಟರಿಯಿಂದ ದೃಡೀಕರಣೆ ಮಾಡಲಾದ ಮೂಲ ಬಾಂಡುಗಳನ್ನು ಸಲ್ಲಿಸುವಂತೆ ಈಗಾಗಲೇ ಸೂಚಿಸಲಾಗಿದೆ.

ಮೇಲ್ಕಂಡ ಉಲ್ಲೇಖದ ಪತ್ರದಂತೆ ಸರ್ಕಾರಿ ವೈದ್ಯಕೀಯ ಕಾಲೇಜುಗಳ ನಿರ್ದೇಶಕರು ಹಾಗೂ ಡೀನ್‌ರವರು ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳ ಹಾಗೂ ಡೀಮ್ಡ್ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರುಗಳು ನಿಮ್ಮ ನಿಮ್ಮ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿಯಲ್ಲಿ ಕ್ಲೀನಿಕಲ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ ನಿಗದಿತ ನಮೂನೆಯಲ್ಲಿ ನೋಟರಿಯವರಿಂದ ದೃಡೀಕರಣೆ ಮಾಡಲಾದ ಬಾಂಡುಗಳನ್ನು ಪಡೆದು ಅದನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪೋರ್ಟ್‌ಗೆ ಅಪ್‌ಲೋಡ್ ಮಾಡುವಂತೆ ಈ ಮೂಲಕ ಸೂಚಿಸಲಾಗಿದೆ.

1) ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ವೃತ್ತಿಯನ್ನು ಮಾಡಲಿಚ್ಚಿಸುವ ಸ್ನಾತಕ್ಕೋತ್ತರ ಅಭ್ಯರ್ಥಿಗಳು ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲ್ಲಿ ಕಾಯಂ ನೊಂದಣಿ ಮಾಡಲು ಬ್ರೋಚರ್ ಕ್ರಮಸಂಖ್ಯೆ 4 ರಂತೆ ಕಡ್ಡಾಯವಾಗಿ ಒಂದು ವರ್ಷದ ಗ್ರಾಮೀಣ ಸೇವೆ ಮಾಡುವ ಬಗ್ಗೆ ಬಾಂಡ್‌ನ್ನು ನೋಟರಿಯವರಿಂದ ದೃಡೀಕರಿಸಿ ಸಲ್ಲಿಸುವಂತೆ ಸೂಚಿಸಲಾಗಿದೆ.